# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 212 |
| ಸದಸ್ಯರ ಹೆಸರು | ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 14.12.2021 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ, ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಂಪುಕಲ್ಲಿನ ಮತ್ತು ಶಿಲೆಕಲ್ಲಿನ ಗಣಿಗಾರಿಕೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಇಲಾಖಾ ಪರವಾನಗಿ ಪಡೆದ ಗಣಿಗಾರಿಕೆಗಳ ಸಂಖ್ಯೆ ಎಷ್ಟು; ಸರ್ಕಾರಿ ಸ್ಥಳದಲ್ಲಿ ಹಾಗೂ ಖಾಸಗಿಯವರ ಸ್ಥಳದಲ್ಲಿ ನಡೆಸಲಾಗುತ್ತಿರುವ ಗಣಿಗಾರಿಕೆಗಳ ಸಂಖ್ಯೆ ಎಷ್ಟು; (ಗಣಿಗಾರಿಕೆವಾರು, ತಾಲ್ಲೂಕುವಾರು ಮಾಹಿತಿಯನ್ನು ನೀಡುವುದು) | ಉಡುಪಿ ಜಿಲ್ಲೆಯಲ್ಲಿ 125 ಶಿಲೆ ಕಲ್ಲುಗಣಿ ಗುತ್ತಿಗೆ ಮತ್ತು 01 ಕೆಂಪುಕಲ್ಲು ಗಣಿ ಗುತ್ತಿಗೆ ಚಾಲ್ತಿಯಲ್ಲಿರುತ್ತವೆ.<br><br>ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ಹಾಗೂ (ತಿದ್ದುಪಡಿ) ನಿಯಮಗಳು, 2020 ರ ನಿಯಮ 3-A(b) ರಂತೆ ಪಟ್ಟಾ ಜಮೀನುಗಳನ್ನು ಕೃಷಿ ಯೋಗ್ಯ ಜಮೀನುಗಳನ್ನಾಗಿ ಅಭಿವೃದ್ಧಿಪಡಿಸುವ ಸಂಬಂಧ ಲ್ಯಾಟರೈಟ್ ತೆರವುಗೊಳಿಸಲು 17 ಕಾರ್ಯಾದೇಶ ಗಳನ್ನು ನೀಡಲಾಗಿರುತ್ತದೆ.<br><br>**ತಾಲ್ಲೂಕುವಾರು, ಗಣಿವಾರು ವಿವರಗಳನ್ನು ಅನುಬಂಧ-01 ಮತ್ತು 02 ರಲ್ಲಿ ನೀಡಲಾಗಿದೆ.** |
| ಆ) | ಉಡುಪಿ ಜಿಲ್ಲೆಯಲ್ಲಿ ಸ್ಥಗಿತಗೊಳಿಸಲಾದ ಕೆಂಪುಕಲ್ಲಿನ ಮತ್ತು ಶಿಲೆಕಲ್ಲಿನ ಗಣಿಗಾರಿಕೆಗಳು ಯಾವುವು; ಅವುಗಳು ಪ್ರಸ್ತುತ ಯಾವ ಸ್ಥಿತಿಯಲ್ಲಿವೆ; ಈ ಗಣಿಗಳು ಮುಚ್ಚಲ್ಪಡದೇ ಮತ್ತು ಆವರಣ ನಿರ್ಮಿಸದೇ ಅಪಾಯಕಾರಿ ಸ್ಥಿತಿಯಲ್ಲಿರುವುದರ ಕುರಿತು ಇಲಾಖೆಯಿಂದ ಕೈಗೊಂಡ ಕ್ರಮವೇನು; (ಪರವಾನಿಗೆದಾರರ ಮೇಲೆ ದಾಖಲಿಸಿದ ದೂರುಗಳ ಪ್ರತಿಯನ್ನು ಒದಗಿಸುವುದು) | ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿ ಚಾಲ್ತಿಯಲ್ಲಿರುವ ಕಲ್ಲುಗಣಿ ಗುತ್ತಿಗೆಗಳು ಮತ್ತು ಸ್ಥಗಿತಗೊಂಡಿರುವ ವಿವರ ಕೆಳಕಂಡಂತಿದೆ: (see table below)<br><br>ಸದರಿ ಕಲ್ಲುಗಣಿ ಗುತ್ತಿಗೆಗಳ ಸುತ್ತಲೂ ತಂತಿ ಬೇಲಿ ನಿರ್ಮಿಸಲಾಗಿದ್ದು, ಯಾವುದೇ ಅಪಾಯಕಾರಿ ಸ್ಥಿತಿಯಲ್ಲಿರುವುದು ಕಂಡುಬಂದಿರುವುದಿಲ್ಲ. |

| ಕ್ರ. ಸಂ | ಖನಿಜದ ವಿಧ | ಕಾರ್ಯನಿರತ ಗುತ್ತಿಗೆ / ಕಾರ್ಯಾದೇಶ ಗಳ ಸಂಖ್ಯೆ | ಸ್ಥಗಿತ ಗೊಂಡಿರುವ ಗುತ್ತಿಗೆ / ಕಾರ್ಯಾದೇಶ ಗಳ ಸಂಖ್ಯೆ |
|---|---|---|---|
| 1 | ಶಿಲೆ ಕಲ್ಲು | 110 | 15 |
| 2 | ಕೆಂಪುಕಲ್ಲು | 1 | 0 |
| 3 | ಲ್ಯಾಟರೈಟ್ (ನಿಯಮ 3-A(b)ರಂತೆ ನೀಡಿರುವ ಕಾರ್ಯಾದೇಶಗಳು) | 17 | 0 |